# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 882 (922) |
| ಮಾನ್ಯ ಸದಸ್ಯರ ಹೆಸರು | : | ಡಾ.ತಳವಾರ್ ಸಾಬಣ್ಣ (ನಾಮ ನಿರ್ದೇಶಿತರು) |
| ಉತ್ತರಿಸುವ ಸಚಿವರು | : | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 15.12.2025 |

| ಕ್ರಮ. ಸಂಖ್ಯೆ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿಯ ಭರತೇಶ ಶಿಕ್ಷಣ ಸಂಸ್ಥೆಯಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಆ.ನೇ. ಉಪಾಧ್ಯ ವಿಸ್ತರಣಾ ಕೇಂದ್ರವು 2018 ರಲ್ಲಿ ಆರಂಭಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುತ್ತದೆ. |
| ಆ) | ವಿಸ್ತರಣಾ ಕೇಂದ್ರಕ್ಕೆ ಬೇಕಾದ ಮೂಲಭೂತ ಸೌಕರ್ಯ ಭರತೇಶ ಶಿಕ್ಷಣ ಸಂಸ್ಥೆಯವರು ಒದಗಿಸಿದರು ಆ.ನೇ. ಉಪಾಧ್ಯ ವಿಸ್ತರಣಾ ಕೇಂದ್ರವು ಮುಚ್ಚಿರುವುದಕ್ಕೆ ಕಾರಣಗಳೇನು; | ಆ.ನೇ. ಉಪಾಧ್ಯ ವಿಸ್ತರಣಾ ಕೇಂದ್ರಕ್ಕೆ ವಿದ್ಯಾರ್ಥಿಗಳು ತರಗತಿಗಳಿಗೆ ಸರಿಯಾಗಿ ಹಾಜರಾಗುತ್ತಿಲ್ಲ ಹಾಗೂ ಸದರಿ ವಿದ್ಯಾರ್ಥಿಗಳಿಗೆ ವಸತಿ ನಿಲಯದ ಸಮಸ್ಯೆಯಿದ್ದು, ಸಮಾಜ ಕಲ್ಯಾಣ ಇಲಾಖೆಯು ತಾಂತ್ರಿಕ ಕಾರಣಗಳಿಂದಾಗಿ ವಸತಿ ನಿಲಯವನ್ನು ಮಂಜೂರು ಮಾಡಿರುವುದಿಲ್ಲ. ವಸತಿ ನಿಲಯ ನಿರ್ಮಾಣ ಸಂಬಂಧ ಪ್ರಸ್ತಾಪಿತ ಶೈಕ್ಷಣಿಕ ಸಂಸ್ಥೆ ಹಾಗೂ ಸಮಾಜ ಕಲ್ಯಾಣ ಇಲಾಖೆ ನಡುವೆ ಪರಸ್ಪರ ಒಡಂಬಡಿಕೆಯಾಗಿರುವುದಿಲ್ಲ.<br><br>ಕುಲಸಚಿವರು, ಹಂಪಿ ಕನ್ನಡ ವಿಶ್ವವಿದ್ಯಾಲಯ ಇವರು ಭರತೇಶ ಶಿಕ್ಷಣ ಸಂಸ್ಥೆಗೆ ದಿನಾಂಕ: 20.09.2025 ರಂದು ಪತ್ರ ಬರೆದು ವಿಶ್ವವಿದ್ಯಾಲಯದ ಅಧ್ಯಯನದ ಹಿತದೃಷ್ಟಿಯಿಂದ ಸದರಿ ವಿಸ್ತರಣಾ ಕೇಂದ್ರವನ್ನು ಹಂಪಿ ವಿಶ್ವವಿದ್ಯಾಲಯದ ಸುಪರ್ದಿಗೆ ನೀಡುವಂತೆ ಕೋರಿರುತ್ತಾರೆ. |

..2

| | | |
|---|---|---|
| **ಇ)** | ಬೆಳಗಾವಿ ಜಿಲ್ಲೆ ಶರಣ ಸಾಹಿತ್ಯ ಮತ್ತು ಜೈನ ಸಾಹಿತ್ಯಕ್ಕೆ ಪ್ರಸಿದ್ಧಿ ಪಡೆದಿರುವುದರಿಂದ ಆ.ನೇ. ಉಪಾಧ್ಯ ವಿಸ್ತರಣಾ ಕೇಂದ್ರ ಭರತೇಶ ಶಿಕ್ಷಣ ಸಂಸ್ಥೆಯಲ್ಲಿ ಎಂ.ಎ. ಕನ್ನಡ ಕಲಿಯುವ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲು ಯಾವ ಕ್ರಮಗಳನ್ನು ಕೈಗೊಳ್ಳುವಿರಿ? | ಬೆಳಗಾವಿಯ ಭರತೇಶ ಶಿಕ್ಷಣ ಸಂಸ್ಥೆಯಲ್ಲಿನ ಹಂಪಿ ಕನ್ನಡ ವಿಶ್ವವಿದ್ಯಾಲಯದ ಆ.ನೇ ಉಪಾಧ್ಯ ವಿಸ್ತರಣಾ ಕೇಂದ್ರಕ್ಕೆ ವಿದ್ಯಾರ್ಥಿಗಳು ಹಾಜರಾಗದಿರುವುದರಿಂದ ಹಾಗೂ ವಿದ್ಯಾರ್ಥಿಗಳಿಗೆ ವಸತಿ ನಿಲಯದ ಸಮಸ್ಯೆಯಿರುವುದರಿಂದ ಈ ಕೇಂದ್ರದ ಮುಖ್ಯಸ್ಥರು ದಿನಾಂಕ: 03.09.2024 ರಂದು ಬರೆದ ಪತ್ರದಲ್ಲಿ ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಪ್ರವೇಶಾತಿ ಮಾಡಬಾರದೆಂದು ತಿಳಿಸಿದ ಹಿನ್ನೆಲೆಯಲ್ಲಿ ಸದರಿ ಕಾರ್ಯಕ್ರಮಗಳಿಗೆ ಪ್ರವೇಶಾತಿ ಕೈಗೊಂಡಿರುವುದಿಲ್ಲ. |

**ಸಂಖ್ಯೆ: ಇಡಿ/9/ಕೆವಿವಿ/2025**

(ಡಾ|| ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು